


International Journal of Kannada Research
www.kannadajournal.com

ISSN: 2454–5813
IJKR 2017; 3(4): 69-71
© 2017 IJKR
www.kannadajournal.com
Received: 12-08-2017
Accepted: 13-09-2017

ಉದಯಕುಮಾರ ಎಸ್ ಅರಬಗಟ್ಟೆ
ಕನ್ನಡ ಉಪನ್ಯಾಸಕರು/ ಲೇಖಕರು ಅರಬಗಟ್ಟೆ ಅಂಚೆ, ಹೊನ್ನಾಳಿ ತಾಲ್ಲೂಕ ದಾವಣಗೆರೆ ಜಿಲ್ಲೆ



Correspondence
ಉದಯಕುಮಾರ ಎಸ್ ಅರಬಗಟ್ಟೆ
ಕನ್ನಡ ಉಪನ್ಯಾಸಕರು/ ಲೇಖಕರು ಅರಬಗಟ್ಟೆ ಅಂಚೆ, ಹೊನ್ನಾಳಿ ತಾಲ್ಲೂಕ ದಾವಣಗೆರೆ ಜಿಲ್ಲೆ

# ವಿಶ್ವವಿದ್ಯಾಲಯಗಳಲ್ಲಿ ಸಂಶೋಧನಾ ಅಧ್ಯಯನಗಳು

**ಉದಯಕುಮಾರ ಎಸ್ ಅರಬಗಟ್ಟೆ**

ವಿಶ್ವವಿದ್ಯಾಲಯಗಳು ಜ್ಞಾನದ ದೇಗುಲಗಳಿದ್ದಂತ,ಯಾಕೆಂದರೆ ಇಂದು ಅವು ಪದವಿ ನೀಡುವ ಕಾರಖಾನೆಗಳಾಗಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಇದು ಅತಿಶಯೋಕ್ತಿ ಎನಿಸಬಹುದಾದರೂ ಸಹ ಇದೊಂದು ವಿಶ್ವವಿದ್ಯಾಲಯಗಳು ಮೇಲಿರುವ ಗಂಭೀರ ಆರೋಪ. ಪ್ರಪಂಚದಲ್ಲಿರುವ ವಿಶ್ವವಿದ್ಯಾಲಯಗಳು ಇಂದು ಗುಣಮಟ್ಟದ ಶಿಕ್ಷಣ ನೀಡುವುದರಲ್ಲಿ ಸ್ಪರ್ದೆಯನ್ನೆ ಮಾಡುತ್ತಿವೆ. ಆದರೆ ಭಾರತ ಅದರಲ್ಲೂ ರಾಜ್ಯದ ವಿಶ್ವವಿದ್ಯಾಲಯಗಳು ಹಿಂದೆ ಬಿದ್ದಿವೆ. ಅದಕ್ಕೆ ಕಾರಣಗಳು ಅನೇಕ .

ಪದವಿ ಎಂದರೆ ಅದರಲ್ಲಿ ಪದವಿ, ಸ್ನಾತಕೋತ್ತರ ಪದವಿ, ಪಿ ಎಚ್ ಡಿ ಪದವಿ ಇವು ಪ್ರಮುಖವಾದವು. ಅದರಲ್ಲಿ ನಾವು ಚಿಂತಿಸಬೇಕಾಗಿರುವುದು ಸಂಶೋಧನಾ ಅಧ್ಯಯನಗಳ ಗುಣಮಟ್ಟವನ್ನು. ಸಂಶೋಧನೆಯೇ ಒಂದು ವಿಶ್ವವಿದ್ಯಾಲಯದ ಗುಣಮಟ್ಟ ಮತ್ತು ಶ್ರೇಯಾಂಕವನ್ನು ನಿರ್ಧರಿಸುವ ಮಾನದಂಡಗಳಲ್ಲಿ ಒಂದು. ಏಕೆಂದರೆ ಜಾಗತಿಕ ಮಟ್ಟದಲ್ಲಿ ಇಂದು ಶಿಕ್ಷಣ ಸಂಸ್ಥೆಗಳು ಒಂದಿಲ್ಲೊಂದು ಸಂಶೋಧನಗಳಿಂದ ಪ್ರಖ್ಯಾತಿಗಳಿಸುತ್ತಿವೆ ಮತ್ತು ಶ್ರೇಯಾಂಕದಲ್ಲಿ ಅಗ್ರಸ್ಥಾನಕ್ಕೇರಲು ಅವಣಿಸುತ್ತಿವೆ.ಆದರೆ ಕರ್ನಾಟಕದ ಮಟ್ಟಿಗೆ ಇದು ಸತ್ಯಕ್ಕೆ ದೂರವಾದ ಮಾತು ಹಾಗಾದರೆ ರಾಜ್ಯದ ವಿಶ್ವವಿದ್ಯಾಲಯಗಳ ಸಂಶೋಧನಾ ಅಧ್ಯಯನಗಳು ಈ ಹಿನ್ನಲೆಯಲ್ಲಿ ಹಿಂದೆ ಸರಿದಿದೆ ಎಂಬ ಪ್ರಶ್ನೆ ಮೂಡುತ್ತದೆ. ಇಲ್ಲಿ ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿ ಅಗ್ರ ಶ್ರೇಯಾಂಕಕ್ಕೆರುವುದು ಮುಖ್ಯವಲ್ಲ ,ಬದಲಿಗೆ ಗುಣಮಟ್ಟದ ಸಂಶೋಧನೆಗಳು ನಡೆಯಬೇಕಿದೆ. ಹಾಗಾದರೆ ರಾಜ್ಯದಲ್ಲಿ ಅಂತಹ ಸಂಶೋಧನೆಗಳನ್ನ ವಿಶ್ವವಿದ್ಯಾಲಯಗಳು ಕೈಗೊಳ್ಳುತ್ತಿಲ್ಲವೆ? ಎನ್ನುವುದಕ್ಕಿಂತ ಪರ್ಯಾಯ ಕಾರಣಗಳ ಮೇಲೆ ಬೆಳಕು ಚೆಲ್ಲುವುದೆ ಹೆಚ್ಚು. ಮೂಲಭೂತ ಸೌಕರ್ಯಗಳು, ಆಡಳಿತಾತ್ಮಕ ಮತ್ತು ತಾಂತ್ರಿಕ ವ್ಯವಸ್ಥೆ, ಗುಣಮಟ್ಟದ ಬೋಧನೆ , ವಿದ್ಯಾರ್ಥಿ ಗಳಲ್ಲಿ ಆಸಕ್ತಿ ಇಂತಹ ಅನೇಕ ವಿಷಯಗಳ ಕುರಿತು ಚರ್ಚಿಸುವುದಾದರೆ ಇವುಗಳಿಗೆ ಹೊರತಾದ ಕಾರಣಗಳು ಇವೆ. ಇಂದು ಕರ್ನಾಟಕದ ವಿಶ್ವವಿದ್ಯಾಲಗಳಲ್ಲಿ ಗುಣಮಟ್ಟದ ಸಂಶೋಧನೆಗಳು ನಡೆಯಬೇಕಾದರೆ ಅನೇಕ ವ್ಯತಿರಿಕ್ತ ವಿಚಾರಗಳ ಬಗ್ಗೆ ಚರ್ಚಿಸುವ ಅಗತ್ಯವಿದೆ.

ವಾಸ್ತವದಲ್ಲಿ ಸಂಶೋಧನೆಗಳು ಸಾಮಾಜಿಕ, ಆರ್ಥಿಕ, ಧಾರ್ಮಿಕ ಸುಧಾರಣೆಗಳಾಗಿರಬೇಕು ವಿನಃ ಪದವಿಗಾಗಿ ನಾಮಫಲಕ್ಕಾಗಿ ಅಲ್ಲ. ಇಂದು ಕರ್ನಾಟಕದ ಎಷ್ಟೋ ವಿದ್ಯಾರ್ಥಿಗಳು ಒಂದು ವಿಶ್ವವಿದ್ಯಾಲಯದಲ್ಲಿ ಅರ್ಜಿ ಸಲ್ಲಿಸಿ ಇನ್ನೊಂದು ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ ಪದವಿಯನ್ನೇ ಪಡೆದಿರುತ್ತಾರೆ. ಅದರೂ ಅರ್ಜಿ ಪಡೆದಿರುವ ವಿಶ್ವವಿದ್ಯಾಲಯಗಳು ಶುಲ್ಕ ಮರುಪಾವತಿಸಿಲ್ಲ ಜೊತೆಗೆ ಸಂಶೋಧನಾ ಅಧ್ಯಯನಗಳನ್ನ ಪ್ರಾರಂಭಿಸಿಲ್ಲ ಹಾಗೆ ಕಾಲಹರಣ ಮಾಡುತ್ತಿವೆ. ಯು ಜಿ ಸಿ ನಿಯಮಗಳ ಪ್ರಕಾರ ವಿಶ್ವವಿದ್ಯಾಲಯಗಳಲ್ಲಿ ನೆಟ್, ಸೆಟ್, ಸ್ಲೆಟ್,ಜೆ ಆರ್ ಎಫ್, ಪರೀಕ್ಷೆಯಲ್ಲಿ ಉತ್ತೀರ್ಣರಾಗದವರು ಸಿ ಇ ಟಿ ಪರೀಕ್ಷೆ ಬರಿಯಬೇಕು ನಂತರ ಅರ್ಹತೆ ಆಧಾರದಲ್ಲಿ ಸಂದರ್ಶನ ಮಾಡಬೇಕು, ಆದರೆ ಕೆಲವು ವಿಶ್ವವಿದ್ಯಾಲಯಗಳಲ್ಲಿ ಇನ್ನೂ ಸಹ ಪಿಎಚ್ಡಿ ಪದವಿಗೆ ಸಿಇಟಿ ಬರೆದವರಿಗೆ ಒ ಎಮ್ ಆರ್ ಮತ್ತು ಅದರ ಕಾರ್ಬನ್ ಪ್ರತಿ ನೀಡುತ್ತಿಲ್ಲ ಹಾಗಾದರೆ ಸಂಶೋಧನಾ ಅಧ್ಯಯನದ ಆಯ್ಕೆ ಪ್ರಕ್ರಿಯೆ ಪಾರಾದರ್ಶಕವಾಗಿರಲು ಸಾಧ್ಯವೇ? ಎನ್ನುವುದಕ್ಕೆ ಅಂತಹ ವಿಶ್ವವಿದ್ಯಾಲಯಗಳೇ ಉತ್ತರಿಸಬೇಕಾಗಿದೆ.

ಕೆಲವು ವಿಶ್ವವಿದ್ಯಾಲಯಗಳು ಸಂಶೋಧನಾ ಅಧ್ಯಯನಕ್ಕೆ ಆಯ್ಕೆ ಮಾಡುವಾಗ ಸಂದರ್ಶನ ಮಾಡುವಾಗ ಅವರದೇ ವಿಶ್ವವಿದ್ಯಾಲಯಗಳಲ್ಲಿ ಪದವಿ ಪಡೆದವರಿಗೆ ಮತ್ತು ಪರಿಚಯಸ್ಥರಿಗೆ ಮೊದಲ ಆದ್ಯತೆ ಹಾಗೂ ಅವಕಾಶ ನೀಡುತ್ತಾರೆ. ಹಾಗಾದರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಪದವಿ ಪಡೆದವರು ಮತ್ತು ಪರಿಚಯಸ್ಥರಲ್ಲದವರು ಸಂಶೋಧನಾ ಅಧ್ಯಯನ ಮಾಡಲು ಅರ್ಹರಲ್ಲವೇ? ಎನ್ನುವುದು ಅವರ ದೃಷ್ಟಿಕೋನದಲ್ಲಿ ಸ್ಪಷ್ಟವಾಗುತ್ತದೆ ಇದು ಬದಲಾಗಬೇಕಿದೆ. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ದೂರ ಶಿಕ್ಷಣದ ಮೂಲಕ ಪದವಿ ಪಡೆದವರಾದರೆ ಸಂಶೋಧನಾ ಅಧ್ಯಯನದ ಸಂದರ್ಶನ ತನ್ನ ಮೂಲ ಆಶಯದ ಪ್ರಶ್ನೆಗಳ ಬದಲಿಗೆ ಅನ್ಯತಃ ಪ್ರಶ್ನೆಗಳ ಸುರಿಮಳೆಯೇ ನಡೆಯುತ್ತದೆ ಇದರರ್ಥ ದೂರ ಶಿಕ್ಷಣದ ವಿಶ್ವವಿದ್ಯಾಲಯಗಳಲ್ಲಿ ಪದವಿ ಪಡೆದವರಿಂದ ಗುಣಮಟ್ಟದ ಸಂಶೋಧನಾ ಅಧ್ಯಯನ ನೀರೀಕ್ಷಣೆ ಸಾಧ್ಯವಿಲ್ಲವೇ ಎಂಬುದಕ್ಕೆ ಅಂತಹ ಸಂದರ್ಶನಕಾರರೇ ಹೇಳಬೇಕಾಗಿರುವುದು ಗಮನರ್ಹ ಸಂಗತಿಯಾಗಿದೆ. ಇನ್ನೂ ಕೆಲವು ವಿಶ್ವವಿದ್ಯಾಲಯಗಳಲ್ಲಿ ಮಾರ್ಗದರ್ಶಕರ ಜೊತೆ ನಿಕಟ ಸಂಪರ್ಕ ಹಾಗು ಸಂಬಂಧ ಇದ್ದರೆ ಮಾತ್ರ ಸಂಶೋಧನಾ ಅಧ್ಯಯನಕ್ಕೆ ಆಯ್ಕೆ ಮಾಡುತ್ತಾರೆ. ಇದರ ಅರ್ಥವಾದರೂ ಏನು? ಹಾಗಾದರೆ ಸಂಬಂಧ, ಸಂಪರ್ಕಗಳಿಲ್ಲದವರಿಂದ ಸಂಶೋಧನಾ ಅಧ್ಯಯನ ಸಾಧ್ಯವಿಲ್ಲವೇ? ನಂತರ ಸಂಶೋಧನಾ ಅವಧಿಯಲ್ಲಿ ಸಂಪರ್ಕ ಇರುವುದಿಲ್ಲವೇ? ಎಂಬುದೇ ವಿಪರ್ಯಾಸವಾಗಿದೆ. ಇತ್ತೀಚೆಗೆ ಕರ್ನಾಟಕದ ವಿಶ್ವವಿದ್ಯಾಲಯಯೊಂದು ಸಂಶೋಧನಾ ಅಧ್ಯಯನ ಮಾಡಲು ಅಧಿಸೂಚನೆಗಳನ್ನ ಹೊರಡಿಸಿ, ಒ ಎಮ್ ಆರ್ ಇಲ್ಲದೆ ಪರಿಕ್ಷೆ ನಡೆಸಿ ಎಲ್ಲಾ ವಿಷಯಗಳಲ್ಲಿ ಪದವಿ ಪಡೆದವರನ್ನು ಸಂಶೋದನಾರ್ಥಿಗಳನ್ನಾಗಿ ಆಯ್ಕೆ ಮಾಡಿಕೊಂಡಿರುತ್ತಾರೆ ಆದರೆ ಅಲ್ಲಿರುವ ವಿಭಾಗಗಳಗೆ ತಕ್ಕಂತಹ ಪದವಿ ಪಡೆಯದವರನ್ನೂ ಸಹ ಆಯ್ಕೆ ಮಾಡಿಕೊಂಡು ಆಗ ಅಂತವರಿಗೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ನಿಮ್ಮ ಪದವಿ ವಿಷಯಗಳಲ್ಲಿಯೇ ನಿಮಗೆ ಸಂಶೋಧನಾ ಪದವಿ ನೀಡುತ್ತೇವೆ ಎಂದು ಹೇಳಿದ್ದರು ಆದರೆ ಏಕಾಏಕಿ ಈಗ ವಿಶ್ವವಿದ್ಯಾಲಯ ಹೊಸ ಸಾರಥಿಯವರು ನಮ್ಮಲ್ಲಿರುವ ವಿಭಾಗಳಲ್ಲಿಯೇ ನಿಮಗೆ ಸಂಶೋಧನಾ ಪದವಿ ನೀಡುತ್ತೇವೆ ಎಂದು ಹೇಳಿರುವುದರಿಂದ ಅಂತಹ ಸಂಶೋಧನಾರ್ಥಿಗಳು ಅತಂತ್ರವಾಗಿದ್ದಾರೆ ಅದರಲ್ಲಿ ಕೆಲವರು ಅಧ್ಯಯನವನ್ನೇ ನಿಲ್ಲಿಸಿದ್ದಾರೆ. ಇದು ಘೋರ ಅನ್ಯಾಯವಲ್ಲವೆ ಗುಣಮಟ್ಟದ ಸಂಶೋಧನಾ ಅಧ್ಯಯನಗಳು ಹೊರಬರುವುದಾದರೂ ಹೇಗೆ ಹೇಳಿ?. ಅಂಗವಿಕಲರ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರೂ ಕೂಡ ಅವರನ್ನ ಆಯ್ಕೆ ಮಾಡದೇ ಅಂಗವಿಕಲರ ಸ್ಥಾನಗಳನ್ನ ಹಾಗೆ ಉಳಿಸಿಕೊಂಡಿದೆ, ಹಾಗಾದರೆ ಅಂಗವಿಕಲರಿಂದ ಗುಣಮಟ್ಟದ ಸಂಶೋಧನಾ ಅಧ್ಯಯನಗಳನ್ನ ನಡೆಸಲು ಸಾಧ್ಯವಿಲ್ಲವೇ? ಎಷ್ಟೋ ಜನ ಅಂಗವಿಕಲರು ಉತ್ತಮ ಸಾಧನೆ ಮಾಡಿದ್ದಾರೆ. ವಿಶ್ವವಿದ್ಯಾಲಯದವರು ಅಂಗವಿಕಲರ ಮನವಿಗಳಿಗೆ ಸ್ಪಂದಿಸುವುದಿಲ್ಲ ಎಂಬುದು ಶೋಚನಿಯ ವಿಚಾರವಾಗಿದೆ.

ಇಷ್ಟೆ ಅಲ್ಲದೆ ಘನ ವಿಶ್ವವಿದ್ಯಾಲಯಯೊಂದು ನವೀಕರಣ ವಿಚಾರದಲ್ಲಿ ಎಡವಿದ ಪ್ರಸಂಗ ಎಲ್ಲರಿಗೂ ಗೊತ್ತಿದೆ. ಅಲ್ಲಿನ ಸಂಶೋಧನಾರ್ಥಿಗಳ ಹಾಗೂ ಸಂಶೋಧಕರ ಭವಿಷ್ಯದ ಕಥೆಯ ಬಗ್ಗೆ ವಿಶ್ವವಿದ್ಯಾಲಯಗಳಿಗೆ ಚಿಂತೆಯಿಲ್ಲ ಅದನ್ನ ಹೇಳುವರಾರು?. ಅಂತಹ ಉದ್ಯೋಗಾಕಾಂಕ್ಷಿಗಳ ಬದುಕು ಮೂರಾಬಟ್ಟೆಯಾಗಿದೆ. ಸಂಶೋದನಾರ್ಥಿಗಳ ಆಯ್ಕೆ ವಿಚಾರದಲ್ಲಿ ಹೊರಗಿನ ರಾಜಕಾರಣಗಳು ನಡೆಯುತ್ತವೆ. ಇತ್ತೀಚಿನ ಪತ್ರಿಕೆಗಳಲ್ಲಿ ನೋಡಿದಂತೆ ರಾಜಕೀಯ ಪ್ರಭಾವದಿಂದ ವಿಶ್ವವಿದ್ಯಾಲಯ ಸಂಶೋಧನಾ ಅಧ್ಯಯನದ ನಿಯಮಗಳನ್ನೆ ಬದಲಿಸಿ ವಿದ್ಯಾರ್ಥಿಗಳ ಕೆಂಗಣ್ಣಿಗೆ ಗುರಿಯಾಗಿತ್ತು. ಕೆಲವು ಮಾರ್ಗದರ್ಶಕರು ವಿಷಯದ ಆಯ್ಕೆಯನ್ನು ತಾವೇ ಮಾಡಿ ವಿದ್ಯಾರ್ಥಿಗಳಿಗೆ ನೀಡುತ್ತಾರೆ. ಹಾಗಾದರೆ ಗುಣಮಟ್ಟದ ಸಂಶೋಧನಾ ಅಧ್ಯಯನಗಳು ನಡೆಯಲು ಸಾಧ್ಯವೇ ಇಲ್ಲ ಯಾಕೆಂದರೆ ವಿಷಯದ ಆಯ್ಕೆ ವಿದ್ಯಾರ್ಥಿಗಳ ಆಸಕ್ತಿಗೆ ಅನುಗುಣವಾಗಿರಬೇಕು ಜೊತೆಗೆ ಮಾರ್ಗದರ್ಶಕರು ಸಲಹೆ ನೀಡಬೇಕು. ಆಗ ಮಾತ್ರ ಸಂಶೋಧನೆ ಯಶಸ್ವಿಯಾಗಲು ಸಾಧ್ಯ.ಕೆಲವು ಮಾರ್ಗದರ್ಶಕರು ಈಗಾಗಲೇ ನಡೆದಿರುವ ವಿಷಯಗಳ ಮೇಲೆ ಸಂಶೋಧನೆ ಮಾಡಬಾರದು ಎಂಬ ನಿರ್ಭಂಧ ವಿಧಿಸುತ್ತಾರೆ. ಯಾಕೆ ನಡೆದಿರುವ ಸಂಶೋಧನೆಗಳ ಮೇಲೆ ಸಂಶೋಧನೆ ನಡೆಸಿ ಹೊಸ ವಿಚಾರಗಳನ್ನ,ಬದಲಾವಣೆಗಳನ್ನ ತರಲು ಸಾಧ್ಯವಿಲ್ಲವೇ? ಭ್ರಷ್ಟಚಾರ ಸಂಶೋಧನಾ ಅಧ್ಯಯನಗಳಲ್ಲಿ ನಡೆಯುತ್ತಲೇ ಇದೆ, ಜೊತೆಗೆ ಜಾತಿ ಪ್ರಭಾವ, ಸ್ವಜನ ಪಕ್ಷಪಾತ, ನೆರಹೊರೆ ಹೀಗೆ ಅನೇಕ ವಿಚಾರಗಳು ಪ್ರಭಾವ ಬೀರುತ್ತಲೇ ಇವೆ. ಆದರೆ ಅವುಗಳಿಗೆ ಸರಿಯಾದ ಸಾಕ್ಷಿಗಳ ಕೊರತೆ, ಇಚ್ಚಾಶಕ್ತಿಯ ಕೊರತೆ ಎದ್ದು ಕಾಣುತ್ತಿದೆ.

ಇಷ್ಟೆಲ್ಲಾ ಎಡವಟ್ಟುಗಳು ತಾಂಡವಾಡುತ್ತಿರುವ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಗುಣಮಟ್ಟದ ಸಂಶೋಧನೆಗಳು ಹೊರಹೊಮ್ಮಲು ಸಾಧ್ಯವೇ? ಎಂಬ ಗಂಭೀರ ಚರ್ಚೆ ನಡೆಯಬೇಕಾದ ಅನಿವಾರ್ಯತೆ ಇದೆ. ಏಕೆಂದರೆ ನಮ್ಮ ವಿಶ್ವವಿದ್ಯಾಲಯಗಳಲ್ಲಿ ನಡೆದ ಸಂಶೋದನೆಗಳು ಜಾಗತಿಕ ಮಟ್ಟದಲ್ಲಿ ತೆರೆದುಕೊಳ್ಳಬೇಕು. ಹೊಸ ಚೈತನ್ಯ ಶಕ್ತಿಗಳು ಹೊರಹೊಮ್ಮಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ನಮ್ಮ ರಾಜ್ಯದಲ್ಲಿ ಸಂಶೋಧನಾ ಪದವಿ ಪಡೆದ ಸಂಶೋಧಕರು ದೇಶದ ಮತ್ತು ವಿಶ್ವದ ಯಾವುದೇ ಮೂಲೆಯಲ್ಲಿ ಕರ್ತವ್ಯ ನಿರ್ವಹಿಸುವಂತಾಗಬೇಕು. ಇರುವ ವ್ಯವಸ್ಥೆಯನ್ನು ಬಿಟ್ಟು ಪ್ರಮಾಣಿಕ ಪ್ರಯತ್ನಗಳು ನಡೆಯಬೇಕು. ಬದಲಾವಣೆ ಜಗದ ನಿಯಮ. ಕೆಲವು ಗಂಭೀರ ವಿಚಾರಗಳಿಗೆ ವಿಶ್ವವಿದ್ಯಾಲಯಗಳು ಜರೂರು ಸ್ಪಂದಿಸುವ ಗುಣ ನಮ್ಮ ರಾಜ್ಯದ ವಿವಿ ಗಳಲ್ಲಿ ಕಣ್ಮರೆಯಾಗಬಾರದು. ಕೌಶಲಯುಕ್ತ, ಅರ್ಹತೆಯುಳ್ಳ, ಗುಣಮಟ್ಟವುಳ್ಳವರಿಂದ ಸಂಶೋಧನೆಗಳು ನಡೆಯಬೇಕು. ಪದವಿ ಪ್ರಮಾಣ ಪತ್ರಕ್ಕಿಂತ ಸಂಶೋಧನೆಗಳಿಂದ ಆಗುವ ಬದಲಾಣೆಗಳು ಹಾಗೂ ಅನುಕೂಲಗಳ ಬಗ್ಗೆ ಚಿಂತನೆ ನಡೆಯಬೇಕಿದೆ. ಜಾಗತಿಕ ಮಟ್ಟದಲ್ಲಿ ನಡೆಯುವ ವಿದ್ಯಾಮಾನಗಳಿಗೆ ತಕ್ಕಂತೆ ನಾವು ಬದಲಾಗಬೇಕು ಆದ್ದರಿಂದ ಅವುಗಳಿಗೆ ತಕ್ಕಂತಹ ಸರಿಸಮಾನಾದ ಸಂಶೋಧನಾ ಅಧ್ಯಯನಗಳು ನಡೆಯಬೇಕು. ಸಂಶೋಧನೆಗಳು ಚಿಂತನಾತ್ಮಕವಾಗಿ, ಹೊಸವಿಚಾರಗಳ ಆವಿಷ್ಕಾರ, ವಿಮರ್ಶಾತ್ಮಕವಾಗಿ, ವಸ್ತುನಿಷ್ಠವಾಗಿ ನಡೆಯುವಲ್ಲಿ ವಿಶ್ವವಿದ್ಯಾಲಯಗಳ ಕರ್ತವ್ಯ ಬಹು ಮುಖ್ಯವಾಗಿದೆ. ಸಂಶೋಧನಾ ಅಧ್ಯಯನದ ಅಭ್ಯರ್ಥಿಗಳ ಆಯ್ಕೆಯಲ್ಲಿ ಪಾರದರ್ಶಕತೆ ಮತ್ತು ಪ್ರಸ್ತುತ ಸನ್ನಿವೇಶಗಳಿಗೆ ತಕ್ಕಂತೆ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕಾದ ಜವಬ್ದಾರಿ ಶಿಕ್ಷಣ ಸಂಸ್ಥೆಗಳದ್ದು. ಸಂಶೋಧನಾ ಅಧ್ಯಯನಗಳು ವರ್ತಕರ ಬಿಕರಿ ವಸ್ತುಗಳಾಬಾರದು. ಎಲ್ಲೋ

ಎಲೆಮರಿಕಾಯಂತಿರುವ ಆಸಕ್ತರಿಗೆ, ಅರ್ಹತೆಯುಳ್ಳವರಿಗೆ ಸಂಶೋಧನೆ ಕೈಗೊಳ್ಳಲು ಅವಕಾಶ ಮಾಡಿಕೊಡುವುದು ವಿಶ್ವವಿದ್ಯಾಲಯಗಳ ಆಶಯವಾಗಬೇಕು.

ಕರ್ನಾಟಕದ ವಿಶ್ವವಿದ್ಯಾಲಯಗಳು ಜಾಗತಿಕ ಮಟ್ಟದಲ್ಲಿ ಸ್ಪರ್ದೆ ನೀಡಬೇಕಾದರೆ ಉತ್ತಮ ಗುಣಮಟ್ಟದ ಸಂಶೋದನ ಅಧ್ಯಯಗಳು ನಡೆಯಬೇಕು. ಇದಕ್ಕೆ ವಿಶ್ವವಿದ್ಯಾಲಯಗಳು, ಯು ಜಿ ಸಿಯ ೨೦೧೬ ರ ನಿಯಮಗಳಂತೆ ಉನ್ನತ ಶಿಕ್ಷಣ ಸಂಸ್ಥೆಗಳು, ಉನ್ನತ ಶಿಕ್ಷಣ ಇಲಾಖೆ, ಉನ್ನತ ಶಿಕ್ಷಣ ಪರಿಷತ್, ಉನ್ನತ ಶಿಕ್ಷಣ ಆಕಾಡೆಮಿ, ಸಂಬಂಧಿಸಿದ ಉನ್ನತ ಶಿಕ್ಷಣ ಸಚಿವರ್ಯರು ಸಹಕರಿಸಬೇಕಾಗಿದ್ದೆ.